**1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಸಾಗರ**

ಸಿ.ಸಿ ನಂ. 1718/2025

| | |
|---|---|
| ಸಾಕ್ಷಿದಾರರ ಹೆಸರು | : ಮಹಾಬಲೇಶ್ವರ |
| ತಂದೆಯ/ಗಂಡನ ಹೆಸರು | : ಸಣ್ಣಾನಾಯ್ಕ |
| ವಯಸ್ಸು | : 60 |
| ಉದ್ಯೋಗ | : ನಿವೃತ್ತ ಪಿ ಐ |
| ವಾಸಃ | : ಶಿರಸಿ |

ಸಿ.ಡಬ್ಲ್ಯೂ- 19 ಪಿ.ಡಬ್ಲ್ಯೂ- 2

**ದಿನಾಂಕ 13.07.2026 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ**

ನಾನು 31.08.2023 ರಿಂದ 31.05.2026 ರ ವರೆಗೆ ಸಾಗರದ ಗ್ರಾಮಾಂತರ ಠಾಣೆಯಲ್ಲಿ ಪಿಐ ಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ನಾನು ಕಡತವನ್ನು ಚಾಸಾ-17 ರವರಿಂದ ಸ್ವೀಕರಿಸಿಕೊಂಡು ಮುಂದಿನ ತನಿಖೆ ನಡೆಸಿರುತ್ತೇನೆ. ಚಾಸಾ-18 ರವರನ್ನು ಶಿವಮೊಗ್ಗದ ಮೆಗ್ಗಾಮ್ ಆಸ್ಪತ್ರೆಗೆ ಶವ ತನಿಖೆ ಹಾಗೂ ಮರಣೋತ್ತರ ಪರೀಕ್ಷಾ ವರದಿಯನ್ನು ವೈದ್ಯರಿಂದ ಮಾಡಿಸಿ ಕೊಡಲು ಕಳುಹಿಸಿದ್ದು, ಅದೇ ಶವ ತನಿಖೆ ಕೈಗೊಂಡು ವರದಿಯನ್ನು ಹಾಜರುಪಡಿಸಿರುತ್ತಾರೆ. ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1,3 ಹಾಗೂ 4 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಸ್ಥಳದಲ್ಲಿ ಭಾವಚಿತ್ರ ಹಾಗೂ ಕಚ್ಚಾ ನಕಾಶೆಯನ್ನು ತಯಾರಿಸಿ, ಬೆಳಿಗ್ಗೆ 10.00 ಯಿಂದ 11.00 ಗಂಟೆವರೆಗೆ ನಡೆಸಿರುತ್ತೇನೆ. ಅಪಘಾತ ಪಡಿಸಿದ ವಾಹನದ ಅಮಾನತ್ತು ಪಂಚನಾಮೆಯನ್ನು ಜರುಗಿಸಿ ಭಾವಚಿತ್ರವನ್ನು ತೆಗೆದಿರುತ್ತೆನೆ. ಮದ್ಯಾಹ್ನ 12 ಗಂಟೆಯಿಂದ 1 ಗಂಟೆವರೆಗೆ ನಡೆಸಿರುತ್ತೇನೆ.ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರ್ ಟಿ ಒ ಸಾಗರ ರವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ದಿಃ 07.10.2023 ರಂದು ಅಪಘಾತಪಡಿಸಿದ ವಾಹನ ಮಾಲೀಕ ಚಾಸಾ-12 ರವರಿಗೆ ಕಲಂ 133 ನೋಟಿಸನ್ನು ಜಾರಿ ಮಾಡಿದ್ದು, ಉತ್ತರವನ್ನು ಪಡೆದುಕೊಂಡಿರುತ್ತೇನೆ. ಆರೋಪಿಯನ್ನು ಸೂಕ್ತ ಜಾಮೀನಿನ ಮೇರೆಗೆ

ಬಿಡುಗಡೆ ಮಾಡಿರುತ್ತೇನೆ. ಚಾಸ-2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾಸಾ-12 ರವರಿಗೆ ಸೂಕ್ತ ಇಂಡೆಮಿನಿಟಿ ಬಾಂಡ್ ಪಡೆದು ವಾಹನವನ್ನು ಬಿಟ್ಟುಕೊಟ್ಟಿರುತ್ತೇನೆ. ಚಸಾ-2 ರವರ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ಪಿ ಎಮ್ ವರದಿಯನ್ನು ಸ್ವೀಕರಿಸಿರುತ್ತೇನೆ. ಐ ಎಂ ವಿ ವರದಿಯನ್ನು ಪಡೆದುಕೊಂಡಿರುತ್ತೇನೆ.ಆರೋಪಿಯ ವಿರುದ್ಧ ಆರೋಪ ಸಾಬೀತಾ ಹಿನ್ನೆಲೆಯಲ್ಲಿ ಅಂತಿಮ ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ ಅದನ್ನು ಮೇಲಾಧಿಕಾರಿಗಳಿಗೆ ಹಾಗೂ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿ ಕೊಂಡಿರುತ್ತೇನೆ. ಇಂದು ಗೈರಾಜು ಹಾಜರಾಗಿರುವ ಆರೋಪಿಯನ್ನು ನೋಡಿದರೆ ಗುರುತಿಸುತೆನೆ.

ಕಲಂ 133 ನೋಟಿಸ್ ಅನ್ನು ನಿಪಿ-10 ಎಂದು, ಅದಕ್ಕೆ ನೀಡಿದ ಉತ್ತರವನ್ನು ನಿಪಿ-11 ಎಂದು, ಇಂಡಮನಿಟಿ ಬಾಂಡನ್ನು ನಿಪಿ-12 ಎಂದು, ಐ ಎಂ ವಿ ವರದಿಯನ್ನು ನಿಪಿ-13, ಗಾಯದ ಪ್ರಮಾಣಪತ್ರ ನಿಪಿ-14, ಶವ ಪರೀಕ್ಷಾ ವರದಿಯನ್ನು ನಿಪಿ-15 ಎಂದು, ಶವ ತನಿಖಾ ವರದಿಯನ್ನು ನಿಪಿ-16 ಎಂದು, ನಿಪಿ-2, 3 ಮತ್ತು 4 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಸಿದ ಮೇರೆಗ ಅವುಗಳನ್ನು ಕ್ರಮವಾಗಿ ನಿಪಿ-2(ಬಿ), 3(ಬಿ) ಹಾಗೂ 4(ಬಿ) ಎಂದು, ನಿಪಿ-5 ರಿಂದ ನಿಪಿ-8 ರಲ್ಲಿ ತಾನು ಇರುವುದಾಗಿ ಸಾಕ್ಷಿ ನುಡಿದಿರುತ್ತಾರೆ , ಪ್ರ.ವ.ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-17 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಐ ಎನ್ ಎಸ್ ವಕೀಲರಿಂದಃ**

ಕೃತ್ಯ ನಡೆಯಿತು ಎನ್ನಲಾದ ಸ್ಥಳದಲ್ಲಿ ಟಾಯರ್ ನ ಗುರುತುಗಳು ಇರಲಿಲ್ಲ. ಅದನ್ನು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ. ಚಾಸಾ-5 ಮತ್ತು 6 ರವರು ಚಾಸಾ-1 ರವರ ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ-5 ಮತ್ತು 6 ರವರು ಒಂದೇ ಗ್ರಾಮಸ್ತರು ಎಂದರೆ ಸರಿ. ಆ ಊರಿನವರನ್ನು ಪ್ರತ್ಯೇಕ್ಷ ಸಾಕ್ಷಿಗಳನ್ನಾಗಲೀ ಮಾಡಲು ತೊಂದರೆ ಇರಲಿಲ್ಲ. ನಾನು ಕೃತ್ಯ ನಡೆದ ಸ್ದ.,ಳಕ್ಕೆ ಹೋಗಿದ್ದಾಗಲೀ ಪಂಚನಾಮೆಗಳನ್ನು ಮಾಡಿದ್ದಾಗಲೀ ಸುಳ್ಳು ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಯನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ತನಿಖಾ ಕಾಲದಲ್ಲಿ ಆರೋಪಿಯ ತಪ್ಪಿನಿಂದ ಅಪಘಾತ ಆಗಿಲ್ಲ ಎಂದು ಗೊತ್ತಾದರೂ ಮೃತರಿಗೆ ಪರಿಹಾರ ದೊರಕಿಸಿಕೊಡುವ ಉದ್ದೇಶದಿಂದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.

**1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.1718/2025

ಸಾಕ್ಷಿದಾರರ ಹೆಸರು : ಸ್ವಾಮಿ ಪುಟ್ಟನಾಯ್ಕ

ತಂದೆಯ/ಗಂಡನ ಹೆಸರು : ಪುಟ್ಟ ನಾಯ್ಕ

ವಯಸ್ಸು : 46 ವರ್ಷ

ಉದ್ಯೋಗ : ವ್ಯವಸಾಯ

ವಾಸಃ : ಮಳಲವಳ್ಳಿ

ಸಿ ಡಬ್ಲ್ಯೂ- 6 ಪಿ.ಡಬ್ಲ್ಯೂ- 6

**ದಿನಾಂಕ 13.07.2026. ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ**

ನನಗೆ ಆರೋಪಿ ಪರಿಚಯ ಇರುವುದಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಗೊತ್ತಿರುವುದಿಲ್ಲ.

ಪೋಲಿಸರು ಈ ಪ್ರಕರಣದ ಬಗ್ಗೆ ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ.

(ಸಾಕ್ಷಿಯನ್ನು ಸರ್ಕಾರಿ ವಕೀಲರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಸ.ಸ.ಅ ರವರಿಂದಃ**

ದಿನಾಂಕಃ 27.09.2023 ರಂದು ಚಾಸಾ-1 ರವರ ತಂದೆ ನನ್ನ ತಂದೆ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿತನು ತನಗೆ ಸೇರಿದ ಕೆಎ 15 ಇಜಿ 3563 ಹೊಂಡಾ ಶೈನ್ ಬೈಕನ್ನು ಅಜಾಗರೂಕತೆಯಿಂದ ಹಾಗೂ ಅತೀವೇಗದಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ-1 ರವರ ತಂದಗೆ ಡಿಕ್ಕಿ ಹೊಡೆಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ನಡೆದ ಅಪಘಾತದಿಂದ ಚಾಸಾ1 ರವರ ತಂದೆ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ

ಅಪಘಾತಕ್ಕೆ ಆರೋಪಿಯೇ ಕಾರಣ ಎಂದರೆ ಸರಿಯಲ್ಲ.

ಸಾಕ್ಷಿಗೆ ಈಗ ಓದಿ ಹೇಳಿದಂತೆ "ನಾನು ಮೇಲ್ಕಂಡ ವಿಳಾಸದಲ್ಲಿ ..........................ಪುನಃ ನೋಡಿದರೆ ಗುರುತಿಸುತ್ತೇನೆ" ಎಂದು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆಸರಿಯಲ್ಲ. ಸದರಿ ಹೇಳಿಕೆಯನ್ನು ಉಲ್ಲೇಖಕ್ಕಾಗಿ ನಿಶಾನೆ ಪಿ 19 ಎಂದು ಗುರುತಿಸಲಾಯಿತು.

ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.

**1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.1718/2025

ಸಾಕ್ಷಿದಾರರ ಹೆಸರು : ವೀರಭದ್ರ ನಾಯ್ಕ

ತಂದೆಯ/ಗಂಡನ ಹೆಸರು : ರಾಮ ನಾಯ್ಕ

ವಯಸ್ಸು : 55 ವರ್ಷ

ಉದ್ಯೋಗ : ವ್ಯವಸಾಯ

ವಾಸಃ : ಮಳಲವಳ್ಳಿ

ಸಿ ಡಬ್ಲ್ಯೂ– 5 ಪಿ.ಡಬ್ಲ್ಯೂ– 5

**ದಿನಾಂಕ 13.07.2026. ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:– ಸ.ಸ. ಅ ರವರಿಂದಃ**

ನನಗೆ ಆರೋಪಿ ಪರಿಚಯ ಇರುವುದಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಗೊತ್ತಿರುವುದಿಲ್ಲ.

ಪೋಲಿಸರು ಈ ಪ್ರಕರಣದ ಬಗ್ಗೆ ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ.

(ಸಾಕ್ಷಿಯನ್ನು ಸರ್ಕಾರಿ ವಕೀಲರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಸ.ಸ.ಅ ರವರಿಂದಃ**

ದಿನಾಂಕಃ 27.09.2023 ರಂದು ಚಾಸಾ–1 ರವರ ತಂದೆ ನನ್ನ ತಂದೆ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿತನು ತನಗೆ ಸೇರಿದ ಕೆಎ 15 ಇಜಿ 3563 ಹೊಂಡಾ ಶೈನ್ ಬೈಕನ್ನು ಅಜಾಗರೂಕತೆಯಿಂದ ಹಾಗೂ ಅತೀವೇಗದಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ–1 ರವರ ತಂದಗೆ ಡಿಕ್ಕಿ ಹೊಡೆಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ನಡೆದ ಅಪಘಾತದಿಂದ ಚಾಸಾ1 ರವರ ತಂದೆ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ

ಅಪಘಾತಕ್ಕೆ ಆರೋಪಿಯೇ ಕಾರಣ ಎಂದರೆ ಸರಿಯಲ್ಲ.

ಸಾಕ್ಷಿಗೆ ಈಗ ಓದಿ ಹೇಳಿದಂತೆ " ನಾನು ಮೇಲ್ಕಂಡ ವಿಳಾಸದಲ್ಲಿ ...........................ಪುನಃ ನೋಡಿದರೆ ಗುರುತಿಸುತ್ತೇನೆ" ಎಂದು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆಸರಿಯಲ್ಲ. ಸದರಿ ಹೇಳಿಕೆಯನ್ನು ಉಲ್ಲೇಖಕ್ಕಾಗಿ ನಿಶಾನೆ ಪಿ 18 ಎಂದು ಗುರುತಿಸಲಾಯಿತು.

ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.

**1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.1718/2025

ಸಾಕ್ಷಿದಾರರ ಹೆಸರು : ರವೀಂದ್ರ

ತಂದೆಯ/ಗಂಡನ ಹೆಸರು : ದ್ಯಾವಪ್ಪ

ವಯಸ್ಸು : 37 ವರ್ಷ

ಉದ್ಯೋಗ : ವ್ಯವಸಾಯ

ವಾಸಃ : ಸಿಂಗುಮನೆ

ಸಿ ಡಬ್ಲ್ಯೂ– 4 ಪಿ.ಡಬ್ಲ್ಯೂ– 4

**ದಿನಾಂಕ 13.07.2026. ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:– ಸ.ಸ. ಅ ರವರಿಂದಃ**

ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

ಸಾಕ್ಷಿಗೆ ನಿಪಿ 2 ನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ ಅದನು ನಿಪಿ 2 (ಡಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ 3 ನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ ಅದನು ನಿಪಿ 3 (ಡಿ) ಎಂದು ಗುರುತಿಸಲಾಯಿತು.

ನಿಪಿ–4 ರಲ್ಲಿರುವ ತನ್ನ ಸಹಿಯನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ ಅದನು ನಿಪಿ 4 (ಡಿ) ಎಂದು ಗುರುತಿಸಲಾಯಿತು.

ನಿಪಿ–3 ರಿಂದ 4 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿರುವುದಿಲ್ಲ. ನಿಪಿ 3 ರಿಂದ 4 ಕ್ಕೆ ನಾನು ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ.

(ಸಾಕ್ಷಿಯನ್ನು ಸರ್ಕಾರಿ ವಕೀಲರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು

ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಸ.ಸ.ಅ ರವರಿಂದಃ**

ದಿನಾಂಕಃ 29.09.2023 ರಂದು ಬೆಳಿಗ್ಗೆ 10 ಗಂಟೆಯಿಂದ 11 ಗಂಟೆವರೆಗೆ ನಿಪಿ 2 ರಂತೆ ಪೋಲಿಸರು ನನ್ನ, ಚಾಸಾಃ 1 ಹಾಗೂ ಚಾಸಾಃ 3 ರವರ ಸಮಕ್ಷಮ ಅಮಾನತ್ತು ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕಃ 29.09.2023 ರಂದು ಮದ್ಯಾಹ್ನ 12 ಗಂಟೆಯಿಂದ 1 ಗಂಟೆವರೆಗೆ ನಿಪಿ 3 ರಂತೆ ಪೋಲಿಸರು ನನ್ನ, ಚಾಸಾಃ 1 ಹಾಗೂ ಚಾಸಾಃ 3 ರವರ ಸಮಕ್ಷಮ ಅಮಾನತ್ತು ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ 2, 3 ಮತ್ತು 4 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ನಿಪಿ 2, 3 ಮತ್ತು 4 ಅನ್ನು ನಾನು ಓದಿ ನೋಡಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 2, 3 ಮತ್ತು 4 ರ ಅಂಶಗಳನ್ನು ಪೋಲಿಸರು ಓದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.

**1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.1718/2025

ಸಾಕ್ಷಿದಾರರ ಹೆಸರು : ಶಿವರಾಮ

ತಂದೆಯ/ಗಂಡನ ಹೆಸರು : ರಾಮಪ್ಪ

ವಯಸ್ಸು : 61 ವರ್ಷ

ಉದ್ಯೋಗ : ವ್ಯವಸಾಯ

ವಾಸಃ : ಆಲಳ್ಳಿ

ಸಿ ಡಬ್ಲ್ಯೂ– 3 ಪಿ.ಡಬ್ಲ್ಯೂ– 3

**ದಿನಾಂಕ 13.07.2026. ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:– ಸ.ಸ. ಅ ರವರಿಂದಃ**

ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

ಸಾಕ್ಷಿಗೆ ನಿಪಿ 2 ನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ ಅದನು ನಿಪಿ 2 (ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ 3 ನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ ಅದನು ನಿಪಿ 3 (ಸಿ) ಎಂದು ಗುರುತಿಸಲಾಯಿತು.

ನಿಪಿ–4 ರಲ್ಲಿರುವ ತನ್ನ ಸಹಿಯನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ ಅದನು ನಿಪಿ 4 (ಸಿ) ಎಂದು ಗುರುತಿಸಲಾಯಿತು.

ನಿಪಿ–3 ರಿಂದ 4 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿರುವುದಿಲ್ಲ. ನಿಪಿ 3 ರಿಂದ 4 ಕ್ಕೆ ನಾನು ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ.

(ಸಾಕ್ಷಿಯನ್ನು ಸರ್ಕಾರಿ ವಕೀಲರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು

ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಸ.ಸ.ಅ ರವರಿಂದಃ**

ದಿನಾಂಕಃ 29.09.2023 ರಂದು ಬೆಳಿಗ್ಗೆ 10 ಗಂಟೆಯಿಂದ 11 ಗಂಟೆವರೆಗೆ ನಿಪಿ 2 ರಂತೆ ಪೋಲಿಸರು ನನ್ನ, ಚಾಸಾಃ 1 ಹಾಗೂ ಚಾಸಾಃ 4 ರವರ ಸಮಕ್ಷಮ ಅಮಾನತ್ತು ಪಂನಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕಃ 29.09.2023 ರಂದು ಮದ್ಯಾಹ್ನ 12 ಗಂಟೆಯಿಂದ 1 ಗಂಟೆವರೆಗೆ ನಿಪಿ 3 ರಂತೆ ಪೋಲಿಸರು ನನ್ನ, ಚಾಸಾಃ 1 ಹಾಗೂ ಚಾಸಾಃ 4 ರವರ ಸಮಕ್ಷಮ ಅಮಾನತ್ತು ಪಂನಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ 2, 3 ಮತ್ತು 4 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ನಿಪಿ 2, 3 ಮತ್ತು 4 ಅನ್ನು ನಾನು ಓದಿ ನೋಡಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 2, 3 ಮತ್ತು 4 ರ ಅಂಶಗಳನ್ನು ಪೋಲಿಸರು ಓದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.